ಆ. ಹೌದು. ಇದನ್ನು ತಡೆಗಟ್ಟಲು ಕಳ್ಳ ತಡೆಬೇಟೆ ಶಿಬಿರಗಳನ್ನು ಸೂಕ್ಷ್ಮ ಪ್ರದೇಶದಲ್ಲಿ ನಿಯೋಜಿಸಿದ್ದು, ಸಿಬ್ಬಂದಿ ವರ್ಗದವರಿಗೆ ನಿಸ್ತಂತು ಉಪಕರಣ ನೀಡಿ ರಾತ್ರಿ ಹಗಲು ಗಸ್ತು ಕೆಲಸ ನಿರ್ವಹಿಸುವ ವ್ಯವಸ್ಥೆ ಮಾಡಲಾಗಿದೆ. ಕಾವಲು ಸಿಬ್ಬಂದಿಗೆ ವಾಹನ, ಅಗತ್ಯ ಶಸ್ತ್ರಾಸ್ತ್ರ, ನಿಸ್ತಂತು ಉಪಕರಣ ಪೂರೈಕೆ ಮಾಡಿರುವುದಲ್ಲದೆ ನೆರೆ ರಾಜ್ಯ ಪೋಲೀಸ್ ಇಲಾಖಾ ಅಧಿಕಾರಿಗಳೊಂದಿಗೆ ಆನೆ ಹಂತಕರನ್ನು ಪತ್ತೆ ಹಚ್ಚಲು ನೆರವಾಗುವಂತೆ ಸಂಪರ್ಕ ಇರಿಸಿಕೊಳ್ಳಲಾಗಿದೆ.

ಇ. ಹೌದು. ರಾಜ್ಯದ ಅರಣ್ಯ ಅಧಿಕಾರಿಗಳು ಕೆಲವು ಹಂತಕರನ್ನು ಹಿಡಿದು ಅವರ ಮೇಲೆ ಕ್ರಿಮಿನಲ್ ಕೋರ್ಟ್‌ಗಳಲ್ಲಿ ಕೇಸುಗಳನ್ನು ದಾಖಲು ಮಾಡುವುದರಲ್ಲಿ ಸಫಲರಾಗಿದ್ದಾರೆ.

ಈ. ಅರಣ್ಯ ರಕ್ಷಕರಿಗೂ ಅತ್ಯಾಧುನಿಕ ಆಯುಧಗಳನ್ನು ಒದಗಿಸುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿದೆ.

ಉ. ಇಲ್ಲ. ಶಾಮೀಲಾಗಿಲ್ಲ.

ಪಶ್ಚಿಮ ಘಟ್ಟದ ಅರಣ್ಯ ಅಭಿವೃದ್ಧಿ.

1516 (2309)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮಾಂತರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಕಳೆದ ವರ್ಷ ಅಥವಾ ಇಲ್ಲಿಯವರೆಗೆ ಪಶ್ಚಿಮ ಘಟ್ಟಗಳ ಅಭಿವೃದ್ಧಿಗಾಗಿ ವಿದೇಶಿ ಸಂಸ್ಥೆಯ ನೆರವನ್ನು ಪಡೆದಿದೆಯೇ? ಹಾಗಿದ್ದಲ್ಲಿ ಆ ಸಂಸ್ಥೆಯ ಹೆಸರೇನು? ಆ ಸಂಸ್ಥೆಯು ಇಲ್ಲಿಯವರೆಗೆ ಎಷ್ಟು ಮೊತ್ತದ ನೆರವನ್ನು ನೀಡಿದೆ.

ಆ) ಈ ಹಣವನ್ನು ಯೋಜನೇತರ ಕಾರ್ಯಕ್ಕಾಗಿ ಬಳಸಿಕೊಂಡಿರುವುದು ನಿಜವೇ?

ಇ) ಈ ಬಗ್ಗೆ ಸಿ.ಎ.ಜಿ. ವರದಿ ಬಂದಿದೆಯೇ? ಹಾಗಿದ್ದಲ್ಲಿ ಆ ವರದಿಯ ವಿವರ ನೀಡುವುದು?

ಈ) ಈ ನೆರವಿನ ಹಣವನ್ನು ಯಾವ ಯಾವ ಬಾಬತ್ತಿಗೆ ಖರ್ಚು ಮಾಡಲಾಗಿದೆ? ಅವುಗಳ ವಿವರ ನೀಡುವುದು.

ಉ) ಈ ಅವ್ಯವಹಾರದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ

ಕ್ರಮಗಳು ಏನು?

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ):

ಅ) ಹೌದು. ಬ್ರಿಟಿಷ್ ಅಂತರ ರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (ಡಿ.ಎಫ್.ಐ.ಡಿ), ಈವರೆಗೆ ರೂ. 101.04 ಕೋಟಿ ಮೊತ್ತವನ್ನು ನೀಡಿದೆ.

ಆ) ಇಲ್ಲ.

ಇ) ಸಿ.ಎ.ಜಿ. ವರದಿ ಬಂದಿದೆ. ಸಿ.ಎ.ಜಿ. ವರದಿಯ ಸಾರಾಂಶ ಈ ಕೆಳಕಂಡಂತಿದೆ. ನೆಡುತೋಪು ಗುರಿಯಲ್ಲಿ ಕುಂಠಿತ ಪ್ರಗತಿ, ನೆಡುತೋಪು ಬೆಳೆಸಲು ಹೆಚ್ಚುವರಿ ಹಣ ಖರ್ಚು ಮಾಡಿರುವುದು, ಹೆಚ್ಚುವರಿ ಸಸಿಗಳನ್ನು ನೆಟ್ಟಿರುವುದು, ತರಬೇತಿ ಮತ್ತು ಕನ್ಸಲ್ಟೆನ್ಸಿಗೆ ಕಡಿಮೆ ಹಣ ಖರ್ಚು ಮಾಡಿರುವುದು ವಿದೇಶಿ ತಳಿಯ ಅಕೇಶಿಯಾ ಸಸಿಗಳನ್ನು ನೆಟ್ಟಿರುವುದು, ಪ್ಲಾಂಟೇಷನ್ ಜರ್ನಲ್‌ಗಳನ್ನು ಸರಿಯಾಗಿ ನಿರ್ವಹಿಸಿರುವುದಿಲ್ಲ. ಗ್ರಾಮ ಅರಣ್ಯ ಸಮಿತಿಗಳನ್ನು ಸಾಕಷ್ಟು ತೊಡಗಿಸಿಕೊಳ್ಳದಿರುವುದು, ಸಂಶೋಧನೆಗೆ ಕಡಿಮೆ ವೆಚ್ಚ ಮಾಡಿರುವುದು, ಕೆಲವು ಕಟ್ಟಡಗಳ ಕಳಪೆ ನಿರ್ಮಾಣ, ಇತ್ಯಾದಿ.

ಈ) ಪಶ್ಚಿಮ ಘಟ್ಟಗಳ ಅರಣ್ಯ ಪ್ರದೇಶದಲ್ಲಿ ಪರಿಣಾಮಕಾರಿಯ ಕೆಲಸ ಮಾಡಬಲ್ಲ ಗ್ರಾಮ ಅರಣ್ಯ ಸಮಿತಿಗಳ ರಚನೆ ಮತ್ತು ಅವುಗಳ ವ್ಯವಸ್ಥೆ, ಸ್ಥಳೀಯ ಅವಶ್ಯಕತೆಗೆ ಮತ್ತು ಅರಣ್ಯಾಭಿವೃದ್ಧಿಗೆ ಪೂರಕವಾದ ನೆಡುತೋಪು ಬೆಳೆಸುವುದು, ಸಿಬ್ಬಂದಿ ಮತ್ತು ಕಛೇರಿಗಳಿಗಾಗಿ ಕಟ್ಟಡಗಳ ನಿರ್ಮಾಣ, ಅಗತ್ಯ ವಾಹನಗಳ ಖರೀದಿ, ಗ್ರಾಮ ಅರಣ್ಯ ಸಮಿತಿ ಸದಸ್ಯರು ಹಾಗೂ ಇಲಾಖಾ ಸಿಬ್ಬಂದಿಗೆ ತರಬೇತಿ, ಎಂಟ್ರಿಪಾಯಿಂಟ್ ಪ್ರೋಗ್ರಾಂ ಇತ್ಯಾದಿ.

ಉ) ಸಿ.ಎ.ಜಿ. ವರದಿಯಲ್ಲಿ ಯಾವುದೇ ಅಧಿಕಾರಿಯ ಮೇಲೆ ಅವ್ಯವಹಾರದ ಆಪಾದನೆ ಇಲ್ಲ. ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸಿಲ್ಲ.

ರಾಜ್ಯದ ಅರಣ್ಯ ಇಲಾಖೆಯಲ್ಲಿ ಆಡಿಟ್ ನಡೆಸದೆ ಇರುವುದು.

1517(2308)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?